ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

*ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ*

ವಾರ್ತಾ ಸೌಧ, ಸಂಖ್ಯೆ : 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001

ಸಂಖ್ಯೆ: ವಾಇ : ಸುಮಪ : ಪ ಪ್ರ : 2014–15 : ಜುಲೈ 21 , 2014

ಪತ್ರಿಕಾ ಪ್ರಕಟಣೆ

## ಕೃಷ್ಣಾ ನದಿ ನೀರು ಹಂಚಿಕೆ :
## ಆಂಧ್ರ ಪ್ರದೇಶ ಮತ್ತು ತೆಲಂಗಾಣ ನಡುವಿನ ಸಮಸ್ಯೆ

ಬೆಂಗಳೂರು, ಜುಲೈ 21 (ಕರ್ನಾಟಕ ವಾರ್ತೆ) :

ಕೃಷ್ಣಾ ನದಿ ನೀರು ವ್ಯಾಜ್ಯಗಳ ನ್ಯಾಯಾಧಿಕರಣದ ಅಂತಿಮ ಐತೀರ್ಪು ಈಗಾಗಲೇ ಪ್ರಕಟವಾಗಿರುವ ಹಿನ್ನೆಲೆಯಲ್ಲಿ ಹಾಗೂ ಕೃಷಾ ಜಲ ವಿವಾದವು ಈಗಾಗಲೇ ಬಗೆಹರಿದಿರುವ ಹಿನ್ನೆಲೆಯಲ್ಲಿ ಪ್ರಸ್ತುತದಲ್ಲಿ ಕೃಷ್ಣಾ ನದಿ ನೀರು ಹಂಚಿಕೆ ಆಂಧ್ರ ಪ್ರದೇಶ ಮತ್ತು ತೆಲಂಗಾಣ ಎರಡು ರಾಜ್ಯಗಳ ನಡುವಿನ ಸಮಸ್ಯೆ ಎಂದು ಕರ್ನಾಟಕ ಅಭಿಪ್ರಾಯಪಟ್ಟಿದೆ.

ಕೃಷ್ಣಾ ನದಿಯಿಂದ ತೆಲಂಗಾಣಕ್ಕೆ ಹೆಚ್ಚುವರಿ ನೀರು ಹಂಚಿಕೆಯಾಗಬೇಕೆಂಬ ಅಲ್ಲಿನ ಮುಖ್ಯಮಂತ್ರಿ ಶ್ರೀ ಕೆ. ಚಂದ್ರಶೇಖರ ರಾವ್ ಅವರ ಹೇಳಿಕೆಯ ಹಿನ್ನೆಲೆಯಲ್ಲಿ ಇಲ್ಲಿ ಇಂದು ನಡೆದ ಸರ್ವಪಕ್ಷಗಳ ಸದನ ನಾಯಕರ ಸಭೆಯಲ್ಲಿ ಈ ಕುರಿತು ಒಕ್ಕೊರಲ ಅಭಿಪ್ರಾಯ ವ್ಯಕ್ತವಾಯಿತು.

ಆಂಧ್ರ ಪ್ರದೇಶ ವಿಭಜನೆಯ ನಂತರವೂ ನೂತನವಾಗಿ ಉದಯಿಸಿದ ಎರಡೂ ರಾಜ್ಯಗಳೂ ಹಿಂದಿನ ಎಲ್ಲಾ ತೀರ್ಪುಗಳು, ಒಪ್ಪಂದಗಳು ಹಾಗೂ ಕರಾರುಗಳನ್ನು ಮಾನ್ಯ ಮಾಡಬೇಕೆಂಬುದನ್ನು ರಾಜ್ಯ ಪುನರ್ಸಂಘಟನಾ ಕಾಯಿದೆಯಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ. ಆದಕಾರಣ, ಕೃಷಾ ನ್ಯಾಯಾಧಿಕರಣವು ಈಗಾಗಲೇ ಹಂಚಿಕೆ ಮಾಡಿರುವ ನೀರಿನ ಪಾಲನ್ನು ನೂತನವಾಗಿ ಅಸ್ತಿತ್ವಕ್ಕೆ ಬಂದ ತೆಲಂಗಾಣ ರಾಜ್ಯದೊಂದಿಗೆ ಆಂಧ್ರ ಪ್ರದೇಶವು ಹಂಚಿಕೆ ಮಾಡಿಕೊಳ್ಳಬೇಕಿದೆ. ಆದರೆ, ನ್ಯಾಯಾಧಿಕರಣವು ಈಗಾಗಲೇ ಹಂಚಿಕೆ ಮಾಡಿರುವ ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳ ನೀರಿನ ಪಾಲಿನಲ್ಲಿ ಮರು ಹಂಚಿಕೆಗೆ ಅವಕಾಶವಿರುವುದಿಲ್ಲ ಎಂಬುದು ಕರ್ನಾಟಕದ ಸ್ಪಷ್ಟ ನಿಲುವು ಮಾತ್ರವಲ್ಲ, ವಾಸ್ತವ ಸತ್ಯ ಕೂಡಾ ಎಂದು ಕಾನೂನು ತಜ್ಞರು ಸದನ ನಾಯಕರಿಗೆ ವಿವರಿಸಿದರು.

ಕೃಷ್ಣಾ ನ್ಯಾಯಾಧಿಕರಣದ ಅಧಿಸೂಚನೆಯಂತೆ, ಕೃಷ್ಣಾ ಅನುಷ್ಠಾನ ಮಂಡಳಿ ಅಸ್ತಿತ್ವಕ್ಕೆ ಬರುವವರೆಗೆ ತುಂಗಭದ್ರಾ ಮಂಡಳಿಯು ಮುಂದುವರೆಯುತ್ತದೆ. ತದನಂತರ, ಅದು ಕೃಷ್ಣಾ ಅನುಷ್ಠಾನ ಮಂಡಳಿಯೊಂದಿಗೆ ವಿಲೀನವಾಗುತ್ತದೆ. ಆಗಲೂ ಕೂಡಾ, ಕರ್ನಾಟಕ ಮತ್ತು ಆಂಧ್ರ ಪ್ರದೇಶದ ನೀರು ಹಂಚಿಕೆಯಲ್ಲಿ ಯಾವುದೇ ವ್ಯತ್ಯಾಸ ಅಥವಾ ವ್ಯತ್ಯಯಕ್ಕೆ ಅವಕಾಶವಿಲ್ಲ. ತನಗೆ ಹಂಚಿಕೆಯಾಗಿರುವ ನೀರು ಪಾಲನ್ನು ಆಂಧ್ರ ಪ್ರದೇಶವು, ತೆಲಂಗಾಣ ರಾಜ್ಯದೊಂದಿಗೆ ಹಂಚಿಕೆ ಮಾಡಿಕೊಳ್ಳಬೇಕಿದೆ ಎಂದು ಕಾನೂನು ತಜ್ಞರು ತಿಳಿಸಿದರು.

ಕೃಷ್ಣಾ ನ್ಯಾಯಾಧಿಕರಣದಲ್ಲಿ ದಾಖಲಾಗಿರುವ ಪ್ರಕರಣದ ಹಿನ್ನೆಲೆಯಲ್ಲಿ, ಜುಲೈ 24 ರಂದು ನಡೆಯಲಿರುವ ವಿಚಾರಣೆಯಲ್ಲಿ ರಾಜ್ಯ ತಾಳಲಿರುವ ನಿಲುವು ಕುರಿತಂತೆ ನಡೆದ ಈ ಸಭೆಯಲ್ಲಿ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ, ಜಲಸಂಪನ್ಮೂಲ ಸಚಿವ ಶ್ರೀ ಎಂ. ಬಿ. ಪಾಟೀಲ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಶ್ರೀ ಹೆಚ್. ಕೆ. ಪಾಟೀಲ್, ಯೋಜನಾ ಮತ್ತು ಸಾಂಖ್ಯಿಕ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಶ್ರೀ ಎಸ್. ಆರ್. ಪಾಟೀಲ್, ಪಶು ಸಂಗೋಪನಾ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಶ್ರೀ ಟಿ. ಬಿ. ಜಯಚಂದ್ರ, ಆಹಾರ ಮತ್ತು ನಾಗರೀಕ ಸರಬರಾಜು ಸಚಿವ ಶ್ರೀ ದಿನೇಶ್ ಗುಂಡೂರಾವ್, ರಾಜ್ಯ ವಿಧಾನ ಪರಿಷತ್ತಿನ ಪ್ರತಿಪಕ್ಷ ನಾಯಕ ಶ್ರೀ ಕೆ. ಎಸ್. ಈಶ್ವರಪ್ಪ, ರಾಜ್ಯ ವಿಧಾನ ಸಭೆಯ ಪ್ರತಿಪಕ್ಷ ನಾಯಕ ಶ್ರೀ ಜಗದೀಶ್ ಶೆಟ್ಟರ್, ಜಾತ್ಯಾತೀತ ಜನತಾ ದಳದ ನಾಯಕರಾದ ಶ್ರೀ ಬಸವರಾಜ ಹೊರಟ್ಟಿ ಮತ್ತು ಶ್ರೀ ವೈ. ಎಸ್. ವಿ. ದತ್ತಾ ಅವರು ಪಾಲ್ಗೊಂಡಿದ್ದರು.

ರಾಜ್ಯದ ಮುಖ್ಯ ಕಾರ್ಯದರ್ಶಿ ಶ್ರೀ ಕೌಶಿಕ್ ಮುಖರ್ಜಿ, ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿ ಶ್ರೀ ಡಿ. ಎನ್. ನರಸಿಂಹರಾಜು, ಜಲಸಂಪನ್ಮೂಲ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ ಶ್ರೀ ಕಪಿಲ್ ಮೋಹನ್, ಕಾನೂನು ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ ಶ್ರೀ ಕೆ. ಬಿ. ಚಂಗಪ್ಪ, ಹಿರಿಯ ವಕೀಲರಾದ ಶ್ರೀ ಮೋಹನ್ ಕಾತರಕಿ, ಶ್ರೀ ಎಸ್. ಎಸ್. ಜವಳಿ ಮತ್ತು ಶ್ರೀ ಬ್ರಿಜೇಶ್ ಕಾಳಪ್ಪ, ಅಡ್ವೋಕೇಟ್ ಜನರಲ್ ಶ್ರೀ ರವಿ ವರ್ಮ ಕುಮಾರ್ ಅವರೂ ಸೇರಿದಂತೆ ಕಾನೂನು ತಜ್ಞರು ಸಭೆಯಲ್ಲಿ ಭಾಗವಹಿಸಿ ಮೌಲಿಕ ಸಲಹೆಗಳನ್ನು ನೀಡಿದರು.

**ಮಹದಾಯಿ ನದಿ : 7.5 ಟಿ ಎಂ ಸಿ ನೀರು ಹಂಚಿಕೆಗೆ ಮೊರೆ**

ಇದೇ ಸಂದರ್ಭದಲ್ಲಿ ಮಹದಾಯಿ ನದಿ ನೀರು ಹಂಚಿಕೆ ಕುರಿತಂತೆಯೂ ಚರ್ಚಿಸಿದ ಸಭೆ ಸೆಪ್ಟಂಬರ್ 3 ರಂದು ನಡೆಯುವ ವಿಚಾರಣೆಯ ಸಂದರ್ಭದಲ್ಲಿ ಕುಡಿಯುವ ನೀರು ಉದ್ದೇಶಕ್ಕಾಗಿ 7.5 ಟಿ ಎಂ ಸಿ ನೀರು ಬಿಡುಗಡೆಗೆ ಒತ್ತಾಯಿಸಿ ಮಹದಾಯಿ ಜಲ ವಿವಾದ ನ್ಯಾಯಾಧಿಕರಣದ ಮೊರೆ ಹೋಗುವುದು ಸೂಕ್ತ ಎಂದು ನಿರ್ಧರಿಸಿತು.

********

ಡಿ ಪಿ ಎಂ